ಸುಮಾರು ೫೦೦ ಎಂ.ಟಿ. ಕಾಗದವನ್ನು ಮುಕ್ತಮಾರುಕಟ್ಟೆಯಲ್ಲಿ ಖರೀದಿಸುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಒಟ್ಟಾರೆ, ಶೈಕ್ಷಣಿಕ ವರ್ಷದ ಪ್ರಾರಂಭದ ಹಂತದಲ್ಲಿ ಪಠ್ಯ ಪುಸ್ತಕಗಳ ಮುದ್ರಣ ಸರಬರಾಜಿನ ಬಗ್ಗೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಜೆ. ರಾಜಾಗೌಡ (ಹನೂರು).—ಮಾನ್ಯ ಅಧ್ಯಕ್ಷರೆ, ಪ್ರತಿವರ್ಷ ಮುದ್ರಣಕ್ಕಾಗಿ ಸುಮಾರು ೫೦೦೦ ಮೆಟ್ರಿಕ್ ಟನ್ ಕಾಗದ ಬೇಕು ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆ. ಈ ೫೦೦೦ ಮೆಟ್ರಿಕ್ ಟನ್ ಕಾಗದವನ್ನು ಯಾವ ಯಾವ ಮೂಲಗಳಿಂದ ಸರಬರಾಜು ಮಾಡಿಕೊಳ್ಳುತ್ತೀರಿ ಎನ್ನುವುದು ನನ್ನ ಮೊದಲ ಪ್ರಶ್ನೆ. ಈಗ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಮೈ: ಹಿಂದೂಸ್ಥಾನ್ ಪೇಪರ್ ಕಾರ್ಪೊರೇಷನ್ ಸಂಸ್ಥೆಯು ವತಿಯಿಂದ ಕೇವಲ ೩೫೮೦ ಮೆಟ್ರಿಕ್‌ಟನ್ ಕಾಗದ ಸರಬರಾಜು ಆಗುತ್ತಾ ಇದೆ ಎಂದು ಹೇಳಿದ್ದಾರೆ. ಆದರೆ ಇನ್ನೂ ಸರಬರಾಜು ಆಗಿಲ್ಲ. ಈಗ ನಾವು ಏಪ್ರಿಲ್ ತಿಂಗಳ ಮೊದಲ ಭಾಗದಲ್ಲಿದ್ದೇವೆ. ಜೂನ್ ತಿಂಗಳಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತದೆ. ಇನ್ನು ಒಂದು ತಿಂಗಳಲ್ಲಿ ಮುದ್ರಣ ಕಾರ್ಯವನ್ನು ಪೂರೈಸಿ ಪುಸ್ತಕಗಳನ್ನು ಸರಬರಾಜು ಮಾಡುವುದ ಕ್ಕಾಗುತ್ತದೆಯೇ ? ಎರಡನೆಯದು ವಿದ್ಯುತ್ ಕೊರತೆ ರಾಜ್ಯದಲ್ಲಿ ಬಹಳ ಜಾಸ್ತಿ ಇದೆ. ಇವೊತ್ತಿ ಕೇಂದ್ರ ಸರ್ಕಾರದಿಂದ ರಿಯಾಯಿತಿ ದರದಲ್ಲಿ ಪೇಪರ್ ಸರಬರಾಜಾಗಿಲ್ಲ. ಪಠ್ಯಪುಸ್ತಕಗಳ ನಿರ್ದೇಶನಾಲಯ ದಿಂದ ಪಠ್ಯಪುಸ್ತಕಗಳ ಹಸ್ತ ಪ್ರತಿಗಳು ಸರ್ಕಾರದ ಮುದ್ರಣಾಲಯಕ್ಕೆ ತಲುಪಿಲ್ಲ. ಹೀಗಿರುವಾಗ ಅಷ್ಟು ಬೇಗನೆ ಪಠ್ಯಪುಸ್ತಕಗಳನ್ನು ಪ್ರಿಂಟ್‌ಮಾಡಿ ಸಕಾಲದಲ್ಲಿ ಸರಬರಾಜು ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಈ ೫೦೦೦ ಮೆಟ್ರಿಕ್‌ಟನ್ ಪೇಪರ್ ಯಾವ ಯಾವ ಏಜೆನ್ಸಿಯಿಂದ ಪೂರೈಕೆಯಾಗುತ್ತದೆ ಎನ್ನುವುದನ್ನು ತಿಳಿಸಬೇಕು. ಮತ್ತೆ ಈ ಲೇಖಿಕ್ ಪುಸ್ತಕಗಳನ್ನು ತಯಾರು ಮಾಡುವಂಥ ಎಂ.ಎಸ್.ಐ.ಎಲ್. ನವರು ಕಾಗದ ಇಲ್ಲ ಎಂದು ಕೈಕಟ್ಟಿ ಕೊಂಡು ಕುಳಿತಿದ್ದಾರೆ. ಲೇಖಿಕ್ ಪುಸ್ತಕಗಳನ್ನು ಮಾಡಿ ರಿಯಾಯಿತಿ ದರದಲ್ಲಿ ಕೊಡಬೇಕು, ಆ ಕಾರ್ಯವನ್ನು ಅವರು ನಿರ್ವಹಿಸುತ್ತಿಲ್ಲ. ಸಕಾಲದಲ್ಲಿ ಲೇಖಿಕ್ ಪುಸ್ತಕಗಳು ಮತ್ತು ಪಠ್ಯಪುಸ್ತಕಗಳನ್ನು ಕೊಡುವುದಕ್ಕೆ ಆಗುತ್ತದೆಯೇ. ವಿದ್ಯುತ್ ಕೊರತೆಯಿಂದ ಸಕಾಲದಲ್ಲಿ ಈ ಪುಸ್ತಕಗಳನ್ನು ಸರಬರಾಜು ಮಾಡಲು ಪುವುದಕ್ಕೆ ತಮಗೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಸಮಂಜಸವಾದ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ —ಮಾನ್ಯ ಅಧ್ಯಕ್ಷರೇ, ಇದರಲ್ಲಿ ತೊಂದರೆ ಇದೆ. ತಮಗೆ ತಿಳಿದ ಹಾಗೆ ಹಿಂದೂಸ್ಥಾನ್ ಪೇಪರ್ ಮಿಲ್ಸ್‌ನವರು ಸಬ್ಸಿಡೈಸ್ಡ್ ರೇಟ್‌ನಲ್ಲಿ ಕಾಗದವನ್ನು ಕೊಡುತ್ತಿದ್ದಾರೆ. ಆದ್ದರಿಂದ ನಾವು ಅವರನ್ನು ಅವಲಂಬಿಸಬೇಕಾಗಿದೆ. ಇಲ್ಲದಿದ್ದರೆ ಮಾರ್ಕೆಟ್ಟಿನಲ್ಲಿ ಕೊಂಡು ಕೊಳ್ಳುವುದಾದರೆ ಯಾವುದೇ ಕಷ್ಟ ಬರುವುದಿಲ್ಲ. ಆದರೆ ೧೦೦ಕ್ಕೆ ೧೦೦ರಷ್ಟು ಸಬ್ಸಿಡೈಸ್ ಆಗುವುದರಿಂದ ನಾವು ಅವರನ್ನು ಅವಲಂಬಿಸಿದ್ದೇವೆ. ಅವರು ಕಳುಹಿಸುವುದನ್ನು ಸಾಕಷ್ಟು ತಡಮಾಡ್ತಾರೆ. ಅದು ವಾಸ್ತವಾಂಶ. ಮಾನ್ಯ ಸದಸ್ಯರ ಆತಂಕ ಏನು ಇದೆ, ಅದು ಆಗುವುದಿಲ್ಲ, ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲ – ಅದಕ್ಕೆ ಆಧಾರವಿಲ್ಲ. ಮುಂದಿನ ವರ್ಷದಲ್ಲಿ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅದಷ್ಟೂ ಒದಗಿಸಲು ನಾವು ಪ್ರಯತ್ನ ಮಾಡುತ್ತೇವೆ.

2. ಸಿ ಮತ್ತು ಡಿ ಭೂಮಿ ಮರುಸರ್ವೆ ಕೆಲಸ ಪ್ರಾರಂಭ ಮಾಡದಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರಿ ಆದೇಶ ನಂ. ಆರ್‌ಡಿ ೧೦೬ ಎಲ್‌ಜಿಪಿ, ೮೮ ದಿನಾಂಕ. ೬-೧೮-೧೯೮೮ರ ಪ್ರಕಾರ ಸಿ ಮತ್ತು ಡಿ ಭೂಮಿ ಮರು ಸರ್ವೆಗೆ ಆದೇಶ ಹೊರಡಿಸಿದ್ದರೂ ಈವರೆಗೆ ಸರ್ವೇಕ್ಷಣೆ ಪ್ರಾರಂಭ ಮಾಡದಿರುವುದರಿಂದ ರೈತರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಕಂದಾಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಮಾನ್ಯ ಅಧ್ಯಕ್ಷರೇ, ೧೯೭೮ರಂದು ೧೮ ಲಕ್ಷ ಎಕರೆ ಭೂಮಿಯನ್ನು ಅಂದರೆ, ಸಿ ಮತ್ತು ಡಿ ಭೂಮಿಗಳೆಂದು ವರ್ಗೀಕೃತವಾದ ಭೂಮಿಯನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತು. ಇದರ ಉದ್ದೇಶ ಅರಣ್ಯ ಇಲಾಖೆಯವರು ಇದರಲ್ಲಿ ಅರಣ್ಯವನ್ನು ಬೆಳೆಸಬೇಕೆಂಬ ಕಾರಣದಿಂದ ಈ ವರ್ಗಾವಣೆ ಮಾಡಲಾಗಿದೆ. ಈ ಉದ್ದೇಶದಿಂದ ಅರಣ್ಯ ಇಲಾಖೆಯವರು ಸುಮಾರು ೩.೨೫ ಲಕ್ಷ ಎಕರೆ ಜಾಗವನ್ನು ರಿಜರ್ವ್ ಫಾರೆಸ್ಟ್ ಎಂದು ಹೇಳಿದ್ದಾರೆ. ಉಳಿದ ೧೫ ಲಕ್ಷ ಎಕರೆ ಏನು ಇದೆ, ಅದರಲ್ಲಿ ಅರಣ್ಯವನ್ನು ಬೆಳೆಸಿಲ್ಲ. ಆದರೆ ಅಲ್ಲಿ ಅಫಾರಾಸ್ಟೇಷನ್ ಮಾಡಬೇಕೆಂದು ಅವರು ಹೇಳಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಾಗ

ಸರ್ಕಾರದವರು ಈ ಬಗ್ಗೆ ಒಂದು ಸ್ಪಡಿ ಟೀಮ್ ಮಾಡಿದರು. ಆ ಸ್ಪಡಿ ಟೀಮು ಆಂಧ್ರಪ್ರದೇಶಕ್ಕೆ ಭೇಟಿ ಕೊಟ್ಟಿತು. ಆಂಧ್ರಪ್ರದೇಶದಲ್ಲೂ ಕೂಡ ಇದೇ ತರಹ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದ ಕಾರಣದಿಂದ ಅವರು ಒಂದು ಏನು ಕ್ರಾಪ್ ಸರ್ವೆ ಮಾಡಿದ್ದಾರೆ, ಅದೇ ರೀತಿ ಕ್ರಾಪ್ ಸರ್ವೆಯನ್ನು ನಮ್ಮ ರಾಜ್ಯದಲ್ಲೂ ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿತು. ಆ ಪ್ರಕಾರವಾಗಿ ಒಂದು ಕ್ರಾಪ್ ಸರ್ವೆ ಟೀಮನ್ನು ಕಾನ್ಸ್ಟಿಟ್ಯೂಟ್ ಮಾಡಿಕೊಂಡು ಕ್ರಾಪ್ ಸರ್ವೆ ಪ್ರೋಗ್ರಾಂ ನಮ್ಮ ರಾಜ್ಯದಲ್ಲಿ ಈಗಾಗಲೇ ಪ್ರಾರಂಭ ಮಾಡಲಿಕ್ಕೆ ೬-೧೧-೮೯ರಂದು ಸರ್ಕಾರ ಆದೇಶ ಕೊಟ್ಟಿದೆ ಈ ಒಂದು ಕ್ರಾಪ್ ಸರ್ವೆ ಟೀಮಿನ ಆದೇಶದ ಪ್ರಕಾರ ಎರಡು ವರ್ಷದ ಒಳಗಡೆ ಎಲ್ಲಿ ಅರಣ್ಯ ಬೆಳೆದಿದೆ ಅಥವಾ ಆ ಅರಣ್ಯ ಬೆಳೆಸಲು ಪ್ರಯತ್ನ ಮಾಡಿದ್ದಾರೆ ಮತ್ತು ಎಲ್ಲಿ ಕೃಷಿ ಕಾರ್ಮಿಕರು ಅಥವಾ ರೈತರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ ಅಥವಾ ಅಭಿವೃದ್ಧಿ ಮಾಡಿದ್ದಾರೆ, ಇದನ್ನೆಲ್ಲಾ ವಿಂಗಡಿಸಿ ಒಂದು ಸ್ಪಷ್ಟವಾದ ವರದಿಯನ್ನು ಕೊಡಬೇಕೆಂದು ಈಗಾಗಲೇ ಕ್ರಾಪ್ ಸರ್ವೆಟೀಮಿಗೆ ಸರ್ಕಾರವು ಆದೇಶವನ್ನು ಕೊಟ್ಟಿದೆ ಆ ವರದಿ ಬಂದಮೇಲೆ, ಯಾವರೀತಿಯಾಗಿ ಎಲ್ಲೆಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದ್ದರೆ ಕೃಷಿಕರು ಹಾಗೂ ಕೃಷಿ ಕಾರ್ಮಿಕರು ಎನ್‌ಕ್ರೋಚ್‌ಮೆಂಟ್ ಮಾಡಿ ಅಭಿವೃದ್ಧಿ ಮಾಡಿದ್ದಾರೆ, ಎಂಬುದನ್ನೆಲ್ಲಾ ನೋಡಿ, ಎಲ್ಲೆಲ್ಲಿ ಅರಣ್ಯ ಇಲಾಖೆಯವರು ಅರಣ್ಯವನ್ನು ಬೆಳೆಸಿಲ್ಲ ಅಂತಹದ್ದನ್ನು ವಿಂಗಡಿಸಿ, ಕೃಷಿ ಕಾರ್ಮಿಕರಿಗೆ ಅದನ್ನು ಕೊಡತಕ್ಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಶಿವಮೊಗ್ಗ ವತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿಶೇಷವಾಗಿ ಈ ಹಿಂದೆ ಕಂದಾಯ ಇಲಾಖೆಯಿಂದ ಸಿ ಮತ್ತು ಡಿ ಗುಂಪಿನ ಭೂಮಿಯನ್ನು ಗುರ್ತಿಸಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವಾಗ ಸರ್ಕಾರದ ಮಾರ್ಗಸೂಚಿಯನ್ನು ಗಮನಿಸಿ, ಭೂ ಕಂದಾಯ ನಿಯಮಾವಳಿಯನ್ನು ಉಲ್ಲಂಘಿಸಿ ಕೇವಲ ಕಛೇರಿಯಲ್ಲಿಯೇ ಕುಳಿತು ಸಿ ಮತ್ತು ಡಿ ಶ್ಯಾಂಡನ್ನು ವರ್ಗಾವಣೆ ಮಾಡಿರುವುದು ತಪ್ಪಾಗಿ ಗೊತ್ತಿದೆ. ತಾವು ತಮ್ಮ ಉತ್ತರದಲ್ಲೂ ಇದನ್ನೇ ಹೇಳಿದ್ದೀರಿ. ತಮ್ಮ ಮಾಹಿತಿಗಾಗಿ ಬಹಳ ಸ್ಪಷ್ಟವಾಗಿ ಒಂದು ಉದಾಹರಣೆ ಕೊಡಬಹುದಾದರೆ, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನಲ್ಲಿ ಈ ರೀತಿ ಅವೈಜ್ಞಾನಿಕವಾಗಿ, ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿರುವುದರ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದಾಗ, ಸ್ಪಷ್ಟವಾಗಿ ಜಿಲ್ಲಾಧಿಕಾರಿಗಳು ತಮಗೆ ಪತ್ರ ಬರೆದಿದ್ದಾರೆ. ಈ ರೀತಿ ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿರುವುದು ಸರಿಯಲ್ಲ. ಮರು ಸರ್ವೇಕ್ಷಣೆ ಆಗಬೇಕು ಎಂದು ತಿಳಿಸಿರುತ್ತಾರೆ. ನಾನು ಸಾಗರ ತಾಲ್ಲೂಕಿನ ತಹಶೀಲ್ದಾರ್‌ರವರಿಗೆ ಕೆಲವು ಪ್ರಶ್ನೆಗಳನ್ನು ಕಳುಹಿಸಿ ಕೊಟ್ಟಿದ್ದೆ, ಅದಕ್ಕೆ ಅವರು ಸಹಿ ಮಾಡಿ ಉತ್ತರ ಕಳುಹಿಸಿದ್ದಾರೆ. ಸಾಗರ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಲ್ಲಿ ಸಿ ಮತ್ತು ಡಿ ವರ್ಗದ ಭೂಮಿಯನ್ನು ಅರಣ್ಯ ಇಲಾಖೆಗೆ ನೀಡಲಾಗಿದೆಯೆಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಅವರು ಒಟ್ಟು ೨೪೧ ಗ್ರಾಮಗಳಲ್ಲಿ ಸುಮಾರು ೪೯ ಗ್ರಾಮಗಳಲ್ಲಿ ಈ ರೀತಿಯ ಜಮೀನನ್ನು ವರ್ಗಾವಣೆ ಆಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಈ ರೀತಿ ಕೊಟ್ಟ ಮೇಲೆ ಇನ್ನೆಷ್ಟು ಭೂಮಿ ಉಳಿದಿದೆ ಎಂದು ಕೇಳಿದ್ದಕ್ಕೆ ಮೇಲಿನ ೪೯ ಗ್ರಾಮಗಳಲ್ಲಿ ಬೇರೆ ಯಾವುದೇ ಅಭಿವೃದ್ಧಿ ಕಾರ್ಯಕ್ಕೆ ಒಂದು ಎಕರೆ ಕೂಡ ಜಮೀನು ಉಳಿದಿಲ್ಲವೆಂದು ಹೇಳಿದ್ದಾರೆ ಮತ್ತು ಸೊಪ್ಪಿನ ಬೆಟ್ಟ, ಗೋಮಾಳ, ಕೆರೆ ಜಮೀನುಗಳನ್ನು ವರ್ಗ ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ ತಹಶೀಲ್ದಾರ್‌ರವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ ಗೋಮಾಳ ಉಲ್ ಲಕ್ಷದ ೧೯ ಎಕರೆಗಳನ್ನು ಸೊಪ್ಪಿನ ಬೆಟ್ಟ ೩೯೭೯ ಎಕರೆಗಳನ್ನು ಮತ್ತೆ ೯೭ ಕೆರೆಗಳನ್ನು ಸುಮಾರು ೬೫೫ ಎಕರೆ ಪ್ರದೇಶದಲ್ಲಿ ವರ್ಗಾವಣೆ ಮಾಡಲಾಗಿದೆಯೆಂದು ಹೇಳಿದ್ದಾರೆ ಕೊನೆಯಲ್ಲಿ ಅವರು ಒಂದು ಟಿಪ್ಪಣಿ ಬರೆಯುತ್ತಾ ತಾಲ್ಲೂಕಿನ ಒಟ್ಟು ೨೪೧ ಗ್ರಾಮಗಳ ಪೈಕಿ ೪೯ ಗ್ರಾಮಗಳಲ್ಲಿರತಕ್ಕ ಎಲ್ಲ ಗೋಮಾಳಗಳು ಸೊಪ್ಪಿನಬೆಟ್ಟ, ಕೆರೆ ಇತ್ಯಾದಿ ಸಿ ಮತ್ತು ಡಿ ವರ್ಗದ ಭೂಮಿಗಳನ್ನು ವರ್ಗಾವಣೆ ಮಾಡಲಾಗಿದೆಯೆಂದು ಲಿಖಿತ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡತ್ತೇನೆ. ಈ ವಿಚಾರದಲ್ಲಿ ನಾವು ಕೆಲವು ಶಾಸಕರು, ಸ್ವಯಂ ಸೇವಕ ಸಂಸ್ಥೆಗಳು ಏಪ್ರಿಲ್ ತಿಂಗಳಲ್ಲಿ ಸ್ವತಃ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಈ ಅವ್ಯವಹಾರವನ್ನು ಗಮನಕ್ಕೆ ತಂದಾಗ ಜಿಲ್ಲಾಧಿಕಾರಿಗಳು ಸಾಗರ ತಾಲ್ಲೂಕಿನ ೫೫ ಗ್ರಾಮಗಳನ್ನು ಆಯ್ಕೆ ಮಾಡಿ, ಸಿ ಮತ್ತು ಡಿ ಲ್ಯಾಂಡ್ ವರ್ಗಾವಣೆ ಮಾಡಿರುವ ಬಗ್ಗೆ ಸ್ಥಳ ತನಿಖೆ ಮಾಡಿದಾಗ, ಈ ರೀತಿ ವರ್ಗೀಕರಣ ಕೆಲಸ ಸರಿಯಾಗಿ ನಡೆದಿಲ್ಲ, ಇದರಿಂದ ಗ್ರಾಮದ ಜನಜೀವನಕ್ಕೆ ಮತ್ತು ಸರ್ಕಾರ ಹಮ್ಮಿಕೊಳ್ಳುವ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ ಆಗಿದೆ, ಈ ಬಗ್ಗೆ ಸರ್ಕಾರ ಪುನರ್ ಪರಿಶೀಲಿಸಬೇಕೆಂಬ ವರದಿಯನ್ನು ಸರ್ಕಾರಕ್ಕೆ ೬-೬-೮೯ರಲ್ಲಿ ಕಳುಹಿಸಿಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ತಾವು ಮರು ಸರ್ವೇಕ್ಷಣೆಗೆ ಆಜ್ಞೆ ಮಾಡಿದ್ದೀರಿ. ನಿಮ್ಮನ್ನು ನಾನು ಈ ಪ್ರಶ್ನೆಗೆ ಸಂಬಂಧಪಟ್ಟಂತೆ ನೇರವಾಗಿ ಉತ್ತರ ಬಯಸುತ್ತೇನೆ. ತಾವು ಇಲ್ಲಿ ಏನು ಉತ್ತರ ಕೊಟ್ಟಿದ್ದೀರಿ, ಎಂದರೆ ಸರ್ವೆ ಕಾರ್ಯ ಮುಗಿದ ನಂತರ ಸಿ ಮತ್ತು ಡಿ ವರ್ಗಾವಣೆಯಲ್ಲಿ ನ್ಯೂನತೆಗಳು ಕಂಡುಬಂದಲ್ಲಿ

ಎರಡು ವರ್ಷಗಳೊಳಗೆ ಸರಿಪಡಿಸಲಾಗುವುದೆಂದು ಹೇಳಿದ್ದೀರಿ. ಈಗಾಗಲೇ ಈ ಅರಣ್ಯ ಇಲಾಖೆಯವರು ಸಿ ಮತ್ತು ಡಿ ವರ್ಗ ಭೂಮಿಗಳು ಮೀಸಲು ಅರಣ್ಯಗಳೆಂದು ಘೋಷಣೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಒಂದು ತಾವು ಅರಣ್ಯ ಇಲಾಖೆಯ ಒತ್ತಡಕ್ಕೆ ಮಣಿಯದೆ ಸಿ ಮತ್ತು ಡಿ ವರ್ಗದ ಭೂಮಿಯ ಬಗ್ಗೆ ತಕ್ಷಣ ಸರ್ವೆ ಕಾರ್ಯ ಪ್ರಾರಂಭ ಮಾಡುತ್ತೀರಾ? ಏಕೆಂದರೆ, ಇನ್ನೂ ಎಲ್ಲರಿಗೂ ಸರ್ವೆ ಕಾರ್ಯ ಪ್ರಾರಂಭವಾಗಿಲ್ಲ. ಎರಡನೆಯದು ಸರ್ವೆ ಕಾರ್ಯ ಮುಂಗಿಯಾವವರೆಗೆ ಸಿ ಮತ್ತು ಡಿ ವರ್ಗದ ಜಮೀನುಗಳಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಮೀಸಲು ಅರಣ್ಯ ಎಂದು ಸಾರದಂತೆ, ನೆಡು ತೋಪು ಬೆಳವಣಿಗೆಯಾಗದಂತೆ ಆಜ್ಞೆ ಮಾಡುತ್ತೀರಾ? ಮೂರು, ಈಗಾಗಲೇ ಸಿ ಮತ್ತು ಡಿ ವರ್ಗದ ಭೂಮಿಯಲ್ಲಿನ ದಟ್ಟವಾದ ಅರಣ್ಯ. ಕೋಟ್ಯಾಂತರ ರೂಪಾಯಿ ಬೆಲೆಬಾಳತಕ್ಕ ಅರಣ್ಯವನ್ನು ಸಾಗರ ತಾಲ್ಲೂಕಿನಲ್ಲಿ ಬುಲ್ಡೋಜರ್ ತೆಗೆದುಕೊಂಡು ನಾಶ ಮಾಡುವಂಥ ಸಂದರ್ಭದಲ್ಲಿ ಸ್ಥಳ ತನಿಖೆ ಮಾಡಿ, ಅಧಿಕಾರಿಗಳ ಸಮಕ್ಷಮ ಮಾಡಿರುವಂಥ ದೂರುಗಳು ಇವೆ. ಸರ್ವೆ ಕಾರ್ಯ ಪ್ರಾರಂಭವಾಗುವುದರೊಳಗೆ ಮೀಸಲು ಅರಣ್ಯ ಎಂದು ಘೋಷಣೆ ಮಾಡುವುದಿಲ್ಲವೆಂದು ಆಶ್ವಾಸನೆ ಕೊಡುತ್ತೀರಾ? ಸರ್ಕಾರ ಹೀಗೆ ಮಾಡದಿದ್ದರೆ ಮುಂದೆ ಬರುವಂಥ ದಿನಗಳಲ್ಲಿ ಜನತಾ ಮನೆ ಕೊಡುವುದಕ್ಕೆ ಬಡವರಿಗೆ ಒಂದು ಸೈಟು ಕೊಡಬೇಕಾದರೂ ಕೇಂದ್ರಸರ್ಕಾರಕ್ಕೆ ಮೊರೆಹೋಗುವಂಥ ಒಂದು ವಿಚಿತ್ರವಾದ ಪರಿಸ್ಥಿತಿ ಬರುತ್ತದೆ. ಅಧ್ಯಕ್ಷರೆ ನನ್ನ ಹತ್ತಿರ ಇರತಕ್ಕ ಫೋಟೋಗಳನ್ನು ಹೇಗೆ ರೀತಿ ಅರಣ್ಯ ನಾಶವಾಗುತ್ತಿದೆ ಎಂಬ ಬಗ್ಗೆ ತಮ್ಮ ಮೂಲಕ ಕಳುಹಿಸಿಕೊಡುತ್ತೇನೆ.

ಶ್ರೀ ಎಂ ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಒಂದೆರಡು ವಿಚಾರಗಳನ್ನು ಎತ್ತಿದ್ದಾರೆ. ಮುಖ್ಯವಾಗಿ ಸಿ ಮತ್ತು ಡಿ ವರ್ಗದ ಜಮೀನು ಅರಣ್ಯ ಇಲಾಖೆಗೆ ಪರ್ಗಾವಣೆ ಆಗಿರುವುದರ ಬಗ್ಗೆ ಹೇಳಿದ್ದಾರೆ. ಅರಣ್ಯ ಇಲಾಖೆ ಎಲ್ಲಿ ಮೇರಗಳನ್ನು ಬೆಳೆಸಿಲ್ಲ. ಅಂಥ ಪ್ರದೇಶವನ್ನು ಮೀಸಲು ಅರಣ್ಯ ಎಂದು ಪಾಸತಕ್ಕ ನೋಟಿಫಿಕೇಷನ್‌ಗೆ ಅವಕಾಶ ಕೊಡಕೂಡದೆಂದು ಹೇಳಿದ್ದಾರೆ, ಈ ವಿಚಾರವನ್ನು ಸರ್ಕಾರ ಖಂಡಿತವಾಗಿ ಗಮನಕ್ಕೆ ತೆಗೆದುಕೊಳ್ಳುತ್ತದೆ. ಏಕೆಂದರೆ ಸಿ ಮತ್ತು ಡಿ ವರ್ಗದ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದಂತಹ ಮೂಲ ತತ್ವ ಏನಿದೆ ಅಂದರೆ ಅದು ವ್ಯವಸಾಯಕ್ಕೆ ಯೋಗ್ಯವಲ್ಲದಂತಹ ಜಮೀನು ಆಗಿದೆ ಮತ್ತು ಇತರೆ ಅಭಿವೃದ್ಧಿಕಾರ್ಯಗಳಿಗೆ ಯೋಗ್ಯವಲ್ಲದ ಜಮೀನಾಗಿದೆ ಇದು ಮೂಲ ಉದ್ದೇಶ. ಆದರೆ ಅನೇಕ ಪ್ರದೇಶಗಳು ಸಿ ಅಂಡ್ ಡಿ ಲ್ಯಾಂಡ್ ಏನು ಇದೆ ಅದು ಆ ಕ್ಯಾಟಗರಿಯಲ್ಲಿ ಪೇಪರ್ ಟ್ರಾನ್ಸ್‌ಫರ್ ಆಗಿ ಬಿಟ್ಟಿದೆ. ಸರಿಯಾದಂಥ ಕ್ಲಾಸಿಫಿಕೇಷನ್ ರೆವಿನ್ಯೂ ಇಲಾಖೆ ಮಾಡದೇ ಇದ್ದುದರಿಂದ ಈ ಬಂದೂ ತೊಂದರೆ ಇವೊತ್ತು ಉದ್ಭವವಾಗಿದೆ, ಮತ್ತೆ ಆ ಕ್ಯಾಷ್ ಸರ್ವೆ ಟೀಮ್ ಅಂತ ಹೇಳಿ ಮಾಡಿದ್ದಾರೆ. ಈಗಾಗಲೇ ನಾನು ಹೇಳಿದ್ದೇನೆ. ೨೫ ಅಂತಹ ಟೀಮುಗಳನ್ನು ಈಗಾಗಲೇ ನಿಗದಿಪಡಿಸಿ ಸುಮಾರು ೨೫ ಸರ್ವೇಯರ್‌ಗಳು ೨೫ ದಫ್‌ದಾರ್‌ಗಳನ್ನು ಅವರ ಕೈಯಲ್ಲಿ ಕೊಟ್ಟು ಈಗಾಗಲೇ ಸರ್ವೆಗೆ ಹೋಗಿದ್ದಾರೆ ಮತ್ತೆ ಇನ್ನೂ ಕೂಡ ಅದನ್ನು ಅದಷ್ಟು ಜಾಗ್ರತೆ ಮಾಡಲಿಕ್ಕೆ ಇಷ್ಟ ಸಿಬ್ಬಂದಿಗಳನ್ನು ಒದಗಿಸಬೇಕು. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಒದಗಿಸುತ್ತದೆ. ಸರ್ಕಾರದ್ದು ಒಂದು ವಿಚಾರ ಸ್ಪಷ್ಟ ಇದೆ. ಎಲ್ಲಿ ಅನ್‌ಆಥರೈಸ್ಡ್ ಕ್ಲಾಸಿಫಿಕೇಷನ್ ಆಗಿದೆ, ಆಥವಾ ಕೃಷಿಕಾರ್ಮಿಕರು ಅಗ್ರಿಕಲ್ಚರ್ ಬೆಳೆಸಿದ್ದಾರೆ. ಎಲ್ಲಿ ಇದನ್ನು ಸಾಗುವಳಿಗೆ ಉಪಯೋಗ ಮಾಡಲಿಕ್ಕೆ ಸಾಧ್ಯ ಇದೆ. ಎಲ್ಲಿ ಫಾರೆಸ್ಟ್ ಇಲಾಖೆ. ಎಲ್ಲಿ ಫಾರೆಸ್ಟ್ ಡೆವಲಪ್‌ಮೆಂಟ್ ಮಾಡಲಿಲ್ಲ. ಇದನ್ನು ಸಂಪೂರ್ಣವಾಗಿ ವಿಂಗಡಿಸಿ ಉಳಿದ ಜಾಗವನ್ನು ರೆವಿನ್ಯೂ ಇಲಾಖೆ ಪುನಃಹಿವರ್ಗಾಯಿಸತಕ್ಕಂಥಾದ್ದು ಆಥವಾ ಅನ್‌ಆಥರೈಸ್ಡ್ ಆಕ್ಯುಪೇಷನ್ ಯಾರು ಮಾಡಿದ್ದಾರೆ, ಅವರಿಗೆ ಕೊಡತಕ್ಕ ವಿಚಾರ ಸರ್ಕಾರದ ತೀವ್ರ ಗಮನದಲ್ಲಿದೆ. ಆದರೆ ಈ ಕ್ಲಾಸಿಫಿಕೇಷನ್ ಸಮರ್ಪಕವಾಗಿ ಆಗತಕ್ಕ ರೀತಿಯಲ್ಲಿ ನಾವು ತೀವ್ರವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ತಾವು ಏನು ಸ್ಪೆಸಿಫಿಕ್ ಆಗಿ ಏನು ಕಳುಹಿಸಿದ್ದೀರಿ. ಅದರ ಬಗ್ಗೆ ವರದಿ ತರಿಸಿ ನಾವು ನೋಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ವಿಷಯದ ಬಗ್ಗೆ ಶಿವಮೊಗ್ಗ ಜಿಲ್ಲೆಯಲ್ಲಿ ಸಾಕಷ್ಟು ಹೋರಾಟ ನಡೆದು ಸಂಬಂಧಪಟ್ಟಂತಹ ಮಂತ್ರಿಗಳನ್ನು ಮತ್ತು ಅವೊತ್ತು ಇದ್ದಂಥ ಸರ್ಕಾರಕ್ಕೆ ಒತ್ತಾಯವನ್ನು ತಂದು ಜಿಲ್ಲಾಧಿಕಾರಿಗಳು ಸ್ಥಳ ತನಿಖೆ ಮಾಡಿದಾಗ ಸ್ಪಷ್ಟವಾಗಿ ಈ ಸಿ ಅಂಡ್ ಡಿ ಲ್ಯಾಂಡ್ ವರ್ಗಾವಣೆ ಮಾಡಬೇಕಾದರೆ, ಕೃಷಿ ಅನುಕೂಲಕ್ಕೆ ಇರುವಂಥ ಜಮೀನುಗಳನ್ನು ಮಾಡಿದ್ದಾರೆ ಎಂದು ತಾವು ಒಪ್ಪಿಕೊಂಡಿದ್ದೀರಿ. ನಾನು ಕೇಳುವುದು ಏನೆಂದರೆ ಈ ಸರ್ವೆ ಕಾರ್ಯ ತಕ್ಷಣ ಪ್ರಾರಂಭವಾಗುವುದರೊಳಗಾಗಿ ಈಗಾಗಲೇ ಸಿ ಅಂಡ್ ಡಿ ಲ್ಯಾಂಡ್ ಎಂದು ವರ್ಗಾವಣೆ ಆಗಿ ಹೋಗಿದ್ದು, ಅದನ್ನು ತಮ್ಮ ಒಂದು ಅರಣ್ಯ ಸಂರಕ್ಷಣೆ ಕಾಯಿದೆ ಅಡಿಯಲ್ಲಿ ಮೀಸಲು ಅರಣ್ಯ ಎಂದು ಘೋಷಣೆ ಮಾಡುತ್ತಿದ್ದಾರೆ, ಒಂದು ಸಾರಿ ಮಾಡಿಬಿಟ್ಟರೆ ಅದು ಆಗುವುದಿಲ್ಲ. ಆದ್ದರಿಂದ ಆ ರೀತಿ ಯಾವುದೇ

ಘೋಷಣೆ ಮಾಡದಂತೆ ತಾವು ಒಂದು ಆದೇಶವನ್ನು ಹೊರಡಿಸಿದರೆ ನನಗೆ ಈ ಒಂದು ಪ್ರಶ್ನೆ ಕೇಳಿದ್ದಕ್ಕೆ ತೃಪ್ತಿಯಾಗುತ್ತದೆಂದೂ ಹೇಳುತ್ತೇನೆ.

ಅಧ್ಯಕ್ಷರು.—ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಈಗ ಈಶ್ವರಪ್ಪನವರು ಕೇಳಂತ್ತಾರೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಅಧ್ಯಕ್ಷರೇ, ಈ ರೀತಿ ಮರು ಸರ್ವೆ ಮಾಡುತ್ತೇವೆಂದು ಹಿಂದೆ ಕೂಡ ಆದೇಶ ಕೊಟ್ಟಿದ್ದರು. ಆದರೆ ಅದೇ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಬುಲ್ಡೋಜರ್ ತೆಗೆದುಕೊಂಡು ಹೋಗಿ ಬಡರೈತರು ಏನು ಬಗರ್ ಹುಕುಂ ಮಾಡುತ್ತಿದ್ದ ಸಂದರ್ಭದಲ್ಲಿ ಗುಂಡಿಗಳನ್ನು ತೆಗೆದು ನೀಲಗಿರಿ ಮರಗಳನ್ನು ನೆಡುವಂಥ ಪ್ರಯತ್ನ ನಡೆಯಿತು. ಆ ಸಂದರ್ಭದಲ್ಲಿಯೂ ಕೂಡ ಈ ರೀತಿ ಆರ್ಡರ್ ಮಾಡಿದ್ದರೂ ಕೂಡ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮಾಡುತ್ತಿರುವ ಪ್ರಯತ್ನವನ್ನು ತಮ್ಮ ಗಮನಕ್ಕೆ ತಂದು ಇಷ್ಟೇ ಪ್ರಯತ್ನ ಮಾಡಿದರೂ ಅವರ ಕೆಲಸವನ್ನು ನಿಲ್ಲಿಸಲಿಲ್ಲ. ಈ ಸಂದರ್ಭದಲ್ಲಿ ಸರ್ಕಾರದ ಆರ್ಡರ್ ತೆಗೆದುಕೊಂಡು ಹೋಗಿ ಇಬ್ಬರೂ ಕೂಡ, ಗಮನಹರಿಸಬೇಕಾದ ಸಂದರ್ಭದಲ್ಲಿ ಬುಲ್ಡೋಜರ್ ತೆಗೆದುಕೊಂಡು ಬರುತ್ತಿದ್ದ ಅಧಿಕಾರಿಗಳಿಗೆ ಆ ಬಡ ರೈತರು ಎಚ್ಚರಿಕೆಯನ್ನು ಕೊಟ್ಟು, ನೀವೇನಾದರೂ ನಮ್ಮ ಹತ್ತಿರ ಬಂದರೆ ನಿಮ್ಮನ್ನು ಈ ಗುಂಡಿಯಲ್ಲಿ ಮುಚ್ಚುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ತರಹ ಕೈಏರಿ ಕೃತ್ಯ ಕೈಮೀರಿ ಹೋಗುವ ಮುಂಚೆ ತಕ್ಷಣ ಸರ್ವೆ ಮಾಡಿಸಿಕೊಡಬೇಕು, ಸರ್ಕಾರ ಇದಕ್ಕೆ ಸಮಯವನ್ನು ಕೂಡ ನಿಗದಿ ಮಾಡಬೇಕೆಂದು ಅಧ್ಯಕ್ಷರ ಮೂಲಕ ಒತ್ತಾಯ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಸರ್ಕಾರದ ಕಡತದ ಪ್ರಕಾರ ಏನೇನು ಕಿ ಆರ್ಡ್ ಡಿ ಲ್ಯಾಂಡ್ಸ್ ಇದೆ, ಅದೆಲ್ಲಾ ವರ್ಗಾವಣೆ ಆಗಿದೆ ಆನ್ ಪೇಪರ್. ಅದರಲ್ಲಿ ವರ್ಗಾವಣೆ ಆಗಬೇಕಾದ್ದು ಆಗದೇ ಇರುವ ಪ್ರಶ್ನೆಯೇ ಇಲ್ಲ. ಆದರೆ ಸರ್ಕಾರ ಒಂದು ವಿಚಾರದಲ್ಲಿ ಸಂಪೂರ್ಣವಾಗಿ ಮನಗಂಡಿದೆ, ಏನೆಂದರೆ ಎಲ್ಲಿಲ್ಲಿ ಇದು ಉಳುವೆಗೆ ಅಥವಾ ಸಾಗುವಳಿಗೆ ಅನುಕೂಲವಾಗಿದೆ, ಎಲ್ಲಿ ಫಾರೆಸ್ಟ್ ಇಲಾಖೆ ಅದನ್ನು ಡೆವಲಪ್‌ಮೆಂಟ್ ಮಾಡಿಲ್ಲ, ಆ ಪ್ರದೇಶವನ್ನು ವಿಂಗಡಿಸತಕ್ಕಂಥ ಒಂದು ಉದ್ದೇಶದಿಂದಲೇ ಈ ಕ್ರಾಪ್ ಸರ್ವೆ ಟೀಮನ್ನು ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ವಿೂಸಲು ಅರಣ್ಯಕ್ಕೆ ನೋಟಿಫಿಕೇಷನ್ ಬಹಳ ಆತುರಾತುರವಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆಂದು ಏನು ಹೇಳಿದರು, ಇದು ಅಷ್ಟು ದೂರ ಹೋಗುವುದಿಲ್ಲ. ಏಕೆಂದರೆ, ಇದನ್ನು ಎಲ್ಲಿ ಅರಣ್ಯ ಬೆಳೆಸಿದ್ದಾರೆ ಅದನ್ನು ನಾವು ಬಹುಶಃ ಹಿಂದೆ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆದರೆ ಎಲ್ಲಿ ಅರಣ್ಯ ಬೆಳೆಸಿಲ್ಲ ಅದನ್ನು ಹೊಸದಾಗಿ ವಿೂಸಲು ಅರಣ್ಯ ಅಂತ ಹೇಳಿ ವಿಂಗಡಿಸತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ, ಅದು ಎಲ್ಲಿಯಾದರೂ ಆಗುವ ಪ್ರಶ್ನೆ ಇದ್ದರೆ ಅದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

೪ ಗುಲ್ಬರ್ಗ ಜಿಲ್ಲಾ ಪರಿಷತ್ತಿನ ಕೃಷಿ ಇಲಾಖೆಯವರಿಗೆ ಕೇಂದ್ರ ಸರ್ಕಾರ ಬರಪರಿಹಾರಕ್ಕೆ ನೀಡಿದ ಒಂದು ಕೋಟಿ ರೂಪಾಯಿಗಳ ಅವ್ಯವಹಾರ ಮತ್ತು ಅದರಲ್ಲಿ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಗಳು ಶಾಮೀಲಾಗಿರುವ ಬಗ್ಗೆ

(ಗೊಂದಲ)

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲಾ ಪರಿಷತ್ತಿನ ಕೃಷಿ ಇಲಾಖೆಯವರಿಗೆ ಕೇಂದ್ರ ಸರಕಾರದ ಬರ ಪರಿಹಾರದ ಬಗ್ಗೆ ಬಿಡುಗಡೆ ಮಾಡಿದ ಒಂದು ಕೋಟಿ ರೂಪಾಯಿಗಳ ಅವ್ಯವಹಾರದಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯದರ್ಶಿಗಳು ನೇರವಾಗಿ ಶಾಮೀಲಾಗಿರುವ ವಿಚಾರದ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಗಮನ ಸೆಳೆಯುತ್ತೇನೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮ್ಮ ಅಪ್ಪಣೆ ಪಡೆದು ಒಂದು ನಿಮಿಷ ವಿವರಣೆ ಕೇಳಲು ತಾವು ಅವಕಾಶ ಮಾಡಿಕೊಡುವುದಿಲ್ಲವೆಂದರೆ ಹೇಗೆ? ನಾನು ಗುಟೆಗಟ್ಟಲೆ ಸಮಯವನ್ನು ತೆಗೆದುಕೊಂಡಿಲ್ಲ, ಲಕ್ಷಾಂತರ ಎಕರೆ ಜಮೀನಿನ ಬಗ್ಗೆ ನಾನು ಮಾಹಿತಿ ಕೇಳಲು ಅವಕಾಶ ಕೇಳಿದರೆ ತಪ್ಪುಗೇಳಿಸಿಟ್ಟು ಬರುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ.—ತಾವು ಒಂದು ನಿಮಿಷ ಅವಕಾಶ ಕೊಡದಿದ್ದರೆ ಹೇಗೆ?